**ಅ. ದಾ. ಸಂ. ಃ 269 / 2010**
**ಪಿ.ಡಬ್ಲ್ಯೂ ಃ 01**

**ದಿನಾಂಕ ಃ 21-02-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- 1 ನೇ ಪ್ರತಿವಾದಿಯ ಪರ ಶ್ರೀ. ಎಂ.ಎನ್. ವಕೀಲರಿಂದ ಃ-**

3. ವಿಭಾಗವಾದ ನಂತರ ನಾನು ಮತ್ತು ನನ್ನ ತಮ್ಮ ಪ್ರತ್ಯೇಕ ವ್ಯವಹಾರ ಮಾಡುತ್ತೇವೆ ಎಂದರೆ ಸರಿ. ನಾನು ಮೊದಲಿನಿಂದಲೂ ಬೆಂಗಳೂರಿನಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ತಮ್ಮ ಗವಿನಾಗಮಂಗಲ ಗ್ರಾಮದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಎಲ್ಲಾ ಕಡೆ ವಾಸಿಸುತ್ತಿದ್ದರು ಎನ್ನುತ್ತಾರೆ. ನನ್ನ ತಂದೆಯ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯ ವಿಳಾಸವು ಊರಿನ ವಿಳಾಸವಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬೆಂಗಳೂರಿನದ್ದಾಗಿದೆ ಎನ್ನುತ್ತಾರೆ, ಸದರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ.

4. ನಾನು ನಮ್ಮ ತಂದೆಗೆ ಬೆಂಗಳೂರಿನ ಮೋದಿ ಆಸ್ಪತ್ರೆಯಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿದ್ದು, ಆದರೆ ಯಾವ ವರ್ಷದಲ್ಲಿ ಮಾಡಿಸಿದ್ದೇನೆ ಎಂದು ನನಗೆ ನೆನಪಿಲ್ಲ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿಲ್ಲ. ವಿಭಾಗವಾಗುವ ಪೂರ್ವದಲ್ಲಿ ಕುಟುಂಬದಲ್ಲಿ ಯಾರು ಯಾರಿಂದ ಎಷ್ಟು ಎಷ್ಟು ಸಾಲ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ದಾಖಲೆ ಇದೆ ಎನ್ನುತ್ತಾರೆ. ಭಾರತ್ ಕೋ ಆಪರೇಟಿವ್ ಬ್ಯಾಂಕ್, ಗ್ರಾಜುಯೇಟ್ ಕೋ ಆಪರೇಟಿವ್ ಸೊಸೈಟಿ ಮತ್ತು ಲಕ್ಷ್ಮೀನಾರಾಯಣ ಬ್ಯಾಂಕಿನಲ್ಲಿ ಸಾಲ ಮಾಡಲಾಗಿತ್ತು. ಸದರಿ ಭಾರತ್ ಕೋ ಆಪರೇಟಿವ್ ಬ್ಯಾಂಕ್ ಬೆಂಗಳೂರಿನ ಜಯನಗರದಲ್ಲಿದೆ. ಸದರಿ ಬ್ಯಾಂಕಿನಲ್ಲಿ 1988 ರಿಂದ 1998 ರ ಅವಧಿಯಲ್ಲಿ ಸುಮಾರು 1 ಲಕ್ಷದವರೆಗೆ ನಾನು ಸಾಲ ಮಾಡಿದ್ದೆ. ಸದರಿ ಉಳಿದ ಬ್ಯಾಂಕಿನಲ್ಲಿಯೂ ಕೂಡ ನಾನು ಸದರಿ ಅವಧಿಯಲ್ಲಿ ಸುಮಾರು 25 ರಿಂದ 50 ಸಾವಿರದವರೆಗೆ ಸಾಲ ಮಾಡಿದ್ದೆ. ಸದರಿ ಬ್ಯಾಂಕುಗಳು ಕೂಡ ಬೆಂಗಳೂರಿನಲ್ಲಿದೆ. ಸದರಿ ಸಾಲದ ಸಂಬಂಧ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ಬ್ಯಾಂಕಿಗೆ ಯಾವುದೇ

ಆಸ್ತಿಯನ್ನು ಅಡಮಾನ ಮಾಡಿರಲಿಲ್ಲ. ಸದರಿ ಸಾಲವು ನನ್ನ ವ್ಯಯಕ್ತಿಕ ಸಾಲವಾಗಿತ್ತು.

5. ಸದರಿ ಪಂಚಾಯ್ತಿ ಪಾಲುಪಟ್ಟಿಯಲ್ಲಿ ಯಾವುದೇ ಸಾಲ ಮಾಡಿದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಯಾವುದಾದರೂ ಸಾಲವಿದ್ದಲ್ಲಿ 1 ನೇ ಪ್ರತಿವಾದಿಯು ಸದರಿ ಸಾಲವನ್ನು ತೀರಿಸದಿದ್ದಲ್ಲಿ, ದಾವ ಸ್ವತ್ತನ್ನು ಮಾರಾಟ ಮಾಡಿ, ಸಾಲ ತೀರಿಸುವುದು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಸ್ವತ್ತಿನ ಮೇಲೆ ಕ್ರಮ ವಹಿಸುವುದು ಎಂದು ಮಾತ್ರ ಬರೆಯಲಾಗಿದೆ ಎನ್ನುತ್ತಾರೆ. ಸದರಿ ಕ್ರಮ ವಹಿಸುವುದು ಎಂಬ ಪದವನ್ನು ಬರೆದಿಲ್ಲ ಎಂದರೆ ಸರಿಯಲ್ಲ. 1989 ಮತ್ತು 1997 ರಲ್ಲಿ ಕ್ರಮವಾಗಿ ಮೊದಲ ಮತ್ತು ಎರಡನೇ ಮಗಳ ಮದುವೆಯಾಗಿದೆ. ಸದರಿ ಮದುವೆಯ ಸಮಯದಲ್ಲಿ ನನ್ನ ತಂದೆ ಜೀವಂತವಿದ್ದರು. ಸದರಿಯವರ ಮದುವೆಯನ್ನು 1 ನೇ ಪ್ರತಿವಾದಿ ಮತ್ತು ನನ್ನ ತಂದೆ ಸೇರಿ ಮಾಡಿರುತ್ತಾರೆಂದರೆ ಸಾಕ್ಷಿ ಎಲ್ಲರೂ ಸೇರಿ ಮಾಡಿರುತ್ತೇವೆ ಎನ್ನುತ್ತಾರೆ. ನಾನು ಕೂಡ ಮದುವೆಗೆ ಖರ್ಚು ಮಾಡಿದ್ದೇನೆ ಎಂದು ತೋರಿಸಲು ದಾಖಲಾತಿಗಳು ಇವೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಬ್ಯಾಂಕಿನಲ್ಲಿ ಸಾಲ ಪಡೆದ ಹಾಗೂ ತಂಗಿಗೆ ವಾಹನ ಕೊಡಿಸಿದ ಬಗ್ಗೆ ದಾಖಲೆ ಇದೆ. ಸದರಿ ವಾಹನವನ್ನು 1997 ರ ಅವಧಿಯಲ್ಲಿ ಕೊಡಿಸಿರುತ್ತೇನೆ. ವಾಹನವನ್ನು ಮೊದಲಿಗೆ ನನ್ನ ಹೆಸರಿಗೆ ನೊಂದಾಯಿಸಿ ನಂತರ ನನ್ನ ಬಾಮೈದನಿಗೆ ನೀಡಿರುತ್ತೇನೆ. ನಾನು ಯಾವುದೇ ವಾಹನ ನೀಡಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಭಾಗಕ್ಕೆ ಬಂದ ಆಸ್ತಿಗಳ ಕಂದಾಯ ದಾಖಲಾತಿಗಳನ್ನು ಪರಿಶೀಲನೆ ಮಾಡುತ್ತೀರಿ ಎಂದರೆ ಸರಿಯಲ್ಲ. ನಾನು ಪ್ರತಿವಾರವೂ ಊರಿಗೆ ಹೋಗುತ್ತೇನೆ. ದಾವ ಸ್ವತ್ತಿನ ಅಕ್ಕಪಕ್ಕದಲ್ಲಿ ಯಾರು ಯಾರು ಇದ್ದಾರೆ ಎಂದು ನನಗೆ ಗೊತ್ತಿದೆ. ದಾವ ಸ್ವತ್ತನ್ನು ನಾನು ಊರಿಗೆ ಹೋದಾಗೆಲ್ಲಾ ನೋಡಿರುವುದಿಲ್ಲ. ನಾನು ದಾವ ಸ್ವತ್ತಿನ ಬಳಿ 2010 ರಲ್ಲಿ ಹೋಗಿದ್ದೆ. 2010 ರ ಪೂರ್ವದಲ್ಲಿ ದಾವ ಸ್ವತ್ತಿನಲ್ಲಿ ಯಾರು ಇದ್ದಾರೆ ಮತ್ತು ಏನು ಆಗಿದೆ ಎಂದು ನಾನು ನೋಡಿರುವುದಿಲ್ಲ. ದಾವ ಸ್ವತ್ತಿನ ಸಂಬಂಧ

ಸಾಲವಿರುವ ಬಗ್ಗೆ ನನಗೆ ನೋಟಿಸ್ ಬಂದಿತ್ತು. ಸದರಿ ನೋಟಿಸನ್ನು ಪಿ.ಎಲ್.ಡಿ ಬ್ಯಾಂಕಿನವರು ನೀಡಿರುತ್ತಾರೆ, ಸದರಿ ನೋಟಿಸನ್ನು ಹೊರತು ಪಡಿಸಿ ಬೇರೆ ಯಾರು ನೋಟಿಸ್ ನೀಡಿರುವುದಿಲ್ಲ, ಸದರಿ ನೋಟಿಸ್ ನನ್ನ ಬಳಿ ಇದೆ, ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ.

7. ನಿಪಿ-04 ನಾನು ದೃಢೀಕೃತ ಪ್ರತಿ ಪಡೆಯಲು ಸಲ್ಲಿಸಿದ ಹಣದ ರಸೀದಿಯಾಗಿದೆ ಎಂದರೆ ಸರಿ. ನಿಪಿ-05 ನಕಲು ಎಕ್ಸ್ ಟ್ರಾಕ್ಟ್ ನಕಲು ಪ್ರತಿಯಾಗಿದೆ ಎಂದರೆ ಸರಿ. ನಿಪಿ-06 ಬ್ಯಾಂಕಿನಲ್ಲಿ ಎಷ್ಟು ಉಳಿಕೆ ಹಣ ನೀಡಬೇಕೆಂದು ನೀಡಿದ ದಾಖಲೆಯಾಗಿದೆ. ನೋಟಿಸಿಗೆ ಅನುಗುಣವಾಗಿ ನಾನು ಪಿ.ಎಲ್.ಡಿ ಬ್ಯಾಂಕಿಗೆ ಹಣವನ್ನು ಕಟ್ಟಿರುವುದಿಲ್ಲ. ಸದರಿ ಹಣವನ್ನು ತೀರುವಳಿ ಮಾಡಿದ್ದೀರಾ ಎಂದು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ದಾವೆ ಹೂಡಿ 10 ವರ್ಷದ ನಂತರ ಪ್ರತಿವಾದಿ 1 ರವರು ತೀರುವಳಿ ಮಾಡಿದ್ದಾರೆ ಎನ್ನುತ್ತಾರೆ. ಪಾಲುಪಟ್ಟಿಯಲ್ಲಿ ಪ್ರತಿವಾದಿ 1 ರವರು ಸಾಲ ತೀರುವಳಿ ಮಾಡಿದಿದ್ದಲ್ಲಿ ನನಗೆ ಬರಬೇಕೇಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಪಿ.ಎಲ್.ಡಿ. ಬ್ಯಾಂಕಿನ ಸಂಪೂರ್ಣ ಸಾಲವನ್ನು ತೀರಿಸಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಇತರೆ ಸಾಲಗಳಿವೆ ಎನ್ನುತ್ತಾರೆ. ಇತರೆ ಸಾಲಗಳು ಯಾವುದೇ ಖಾಸಗಿ ವ್ಯಕ್ತಿಗಳಿಂದ ಮಾಡಿರುವುದಿಲ್ಲ. ನಾನು ಖರೀದಿಸಿರುವ ಒಂದು ನಿವೇಶವನ್ನು ಪ್ರತಿವಾದಿಯವರಿಗೆ ಬಿಟ್ಟುಕೊಟ್ಟಿರುವುದಾಗಿ ತಿಳಿಸಿದ್ದು, ಆದರೆ ಪಾಲುಪಟ್ಟಿಯಲ್ಲಿ ಸದರಿ ಸ್ವತ್ತು ಪ್ರತಿವಾದಿ 1 ರವರ ಭಾಗಕ್ಕೆ ಬಂದಿದೆ ಎಂದರೆ ಸರಿ. ಕಾವೇರಿ ಗ್ರಾಮೀಣ ಕಲ್ಪತರು ಬ್ಯಾಂಕಿನಲ್ಲಿ ಸಾಲವಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ಸದರಿ ಸಾಲವನ್ನು 2005 ರಲ್ಲಿ ನಾನು ವ್ಯಯಕ್ತಿಕವಾಗಿ ಮಾಡಿರುತ್ತೇನೆ.

8. ಪಾಲುಪಟ್ಟಿಯಲ್ಲಿ ತಿಳಿಸಿರುವಂತೆ ಸಾಲವನ್ನು ಪ್ರತಿವಾದಿ 1 ರವರು ತೀರಿಸಿದ್ದಾರೆ ಎಂದರೆ ಸಾಕ್ಷಿ ಒಂದು ಸಾಲವನ್ನು ತೀರಿಸಿದ್ದಾರೆ ಎನ್ನುತ್ತಾರೆ. ಪಾಲುಪಟ್ಟಿಯ ಆಧಾರದ ಮೇಲೆ ಪಿ.ಎಲ್.ಡಿ. ಬ್ಯಾಂಕಿನಲ್ಲಿ ಮಾತ್ರ ಸಾಲವಿತ್ತು ಎಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಯಲ್ಲಿ ನಮೂದಿಸಿರುವಂತೆ 1 ನೇ ಪ್ರತಿವಾದಿ

ಮತ್ತು ನನ್ನ ತಂದೆ ಮಾತ್ರ ಹೆಣ್ಣು ಮಕ್ಕಳ ಮದುವೆ ಮಾಡಿದ್ದು, ನಾನು ಯಾವುದೇ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ-1 ರವರಿಗೆ ಇಂತಹ ಸಾಲಗಳನ್ನು ತೀರಿಸಬೇಕೆಂದು ಹೇಳಿ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಪ್ರತಿವಾದಿ 1 ರವರಿಗೆ ಗೊತ್ತಿತ್ತು ಎನ್ನುತ್ತಾರೆ. ಪ್ರತಿವಾದಿ 1 ಮತ್ತು ನನ್ನ ತಂದೆ ಹೆಣ್ಣು ಮಕ್ಕಳ ಮದುವೆ ಮಾಡಲು ಖಾಸಗಿ ವ್ಯಕ್ತಿಗಳಿಂದ ಸಾಲ ಮಾಡಿದ್ದು, ಸದರಿ ಸಾಲವನ್ನು ತೀರಿಸಲು ಪ್ರತಿವಾದಿ 2 ರವರಿಗೆ ದಾವ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ 2000 ನೇ ಇಸವಿಯಲ್ಲಿಯೇ ಗೊತ್ತಿದ್ದರೂ ಕೂಡ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಪಿ.ಎಲ್.ಡಿ. ಬ್ಯಾಂಕಿನಲ್ಲಿ ನನ್ನ ಭಾಗಕ್ಕೆ ಬಂದ ಸ್ವತ್ತಿನ ಮೇಲೆ ಇದ್ದ ಸಾಲವನ್ನು ಕೂಡ ಪ್ರತಿವಾದಿ 1 ರವರು ತೀರಿಸಿದ್ದಾರೆ ಎಂದರೆ ಸರಿ. ದಾವ ಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯ ಸ್ವಾಧೀನ ಮತ್ತು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರಿಗೆ ಬರೆದುಕೊಟ್ಟ ಕ್ರಯಪತ್ರವನ್ನು ರದ್ದುಪಡಿಸುವ ಅವಶ್ಯಕತೆ ಇಲ್ಲ ಹಾಗೂ ಸದರಿ ಸ್ವತ್ತನ್ನು ವಾಪಸ್ಸು ನನಗೆ ಬರೆದುಕೊಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ**

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 2 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**